ಅಧ್ಯಕ್ಷರು : ಅವರು ಪ್ರಶ್ನೆ ಇರುವ ದಿವಸ, ಇದರ ಪೂರ್ಣ ವಿವರಗಳನ್ನು ತಿಳಿದುಕೊಂಡು ಎಷ್ಟು ಎಕರೆ ಇದೆ, ಎಷ್ಟು ಜನ ಉಳುಮೆ ಮಾಡುತ್ತಿದ್ದಾರೆ...

ಶ್ರೀ ಟಿ.ಬಿ. ಜಯಚಂದ್ರ : ನನ್ನ ಒಂದೇ ಕ್ಷೇತ್ರದಲ್ಲಿ 12 ಸಾವಿರ ಎಕರೆ ಬಗರ್ ಹುಕಂ ಸಾಗುವಳಿ ಆಗದೆ. ಅನ್ ಆಥರೈಸ್ಡ್ ಅಪ್ಲಿಕೇಷನ್ಸ್ ಪೆಂಡಿಂಗ್ ಇದೆ.

ಅಧ್ಯಕ್ಷರು : ನಾವು ನೋಡುತ್ತೇವೆ. ಆ 12 ಸಾವಿರ ಎಕರೆಯೂ ಮಂಜೂರಾಗುವ ಹಾಗೆ ಮಾಡಿ, ಆ ಜನ ನಿಮ್ಮಜೊತೆಗೇ ಇರುವಹಾಗೆ ಮಾಡಿ, ಮತ್ತೆ ನೀವು ಸದನಕ್ಕೆ ಬರುವುದಕ್ಕೆ ಎಲ್ಲಾ ವ್ಯವಸ್ಥೆ ಮಾಡುತ್ತೇವೆ. ನನಗೆ ಗೊತ್ತಾಯಿತು, ಅಷ್ಟು ಗೊತ್ತಾಗುವುದಿಲ್ಲವೇ?

ರಾಜ್ಯದಲ್ಲಿ ಹಸಿರು ಕಾರ್ಡುದಾರರಿಗೆ ಪಡಿತರ ಪ್ರಮಾಣ ಕಡಿತ.

247(2089)-ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕೇಂದ್ರ ಸರ್ಕಾರದ ಹೊಸ ಪಡಿತರ ನೀತಿಯಂತೆ ಕರ್ನಾಟಕದಲ್ಲಿರುವ ಹಸಿರು ಕಾರ್ಡುದಾರರಿಗೆ ಪಡಿತರ ವಿತರಣೆ ಮಾಡಲು ಕೇಂದ್ರ ಸರ್ಕಾರವು ಒದಗಿಸಿರುವ ಸಹಾಯಧನ ಎಷ್ಟು? (ಗೋಧಿ ಹಾಗೂ ಅಕ್ಕಿಗೆ ಪ್ರತ್ಯೇಕ ವಿವರ ನೀಡುವುದು)

ಆ) ಕೇಂದ್ರ ಸರ್ಕಾರವು ಈ ಸಹಾಯಧನ ನೀಡುವುದಕ್ಕಿಂತ ಮೊದಲು ರಾಜ್ಯ ಸರ್ಕಾರ ಹಸಿರು ಕಾರ್ಡುದಾರರಿಗೆ ಹಾಗೂ ಕೇಸರಿ ಕಾರ್ಡುದಾರರಿಗೆ ಎಷ್ಟು ಸಹಾಯಧನ ಒದಗಿಸುತ್ತಿದ್ದಿತು. (ಗೋಧಿ ಹಾಗೂ ಅಕ್ಕಿಗೆ ಪ್ರತ್ಯೇಕ ವಿವರ ನೀಡಿದೆ)

ಇ) ಕೇಂದ್ರ ಸರ್ಕಾರದಿಂದ ಈಗ ಪಡಿತರ ವಿತರಣೆಗೆ ಕೇಂದ್ರದ ಸಹಾಯಧನ ಲಭ್ಯವಾಗುತ್ತಿದ್ದರೂ ಸಹ ರಾಜ್ಯದಲ್ಲಿ ಹಸಿರು ಕಾರ್ಡುದಾರರ ಪಡಿತರ ಆಹಾರಧಾನ್ಯ ಬೆಲೆ ಹೆಚ್ಚಿಸಲು ಕಾರಣಗಳೇನು?

ಈ) ಕೇಸರಿ ಕಾರ್ಡುದಾರರ ಪಡಿತರ ಪ್ರಮಾಣ ಕಡಿತ ಮಾಡಲು ಕಾರಣಗಳೇನು?

ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಭಾರತ ಸರ್ಕಾರವು ನಿರ್ದಿಷ್ಟ ಗುರಿ ಯೋಜನೆ ಯಡಿಯಲ್ಲಿ ಯಾವುದೇ ರೀತಿಯ ಸಹಾಯಧನವನ್ನು ಒದಗಿಸಿಲ್ಲ. ಆದರೆ 28.75 ಲಕ್ಷ ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ಕಡಿಮೆ ದರದಲ್ಲಿ ಒದಗಿಸುತ್ತಿದೆ. ಈ ಹಸಿರು ಕಾರ್ಡ್‌ದಾರರು ತಿಂಗಳಿಗೆ 10 ಕಿ.ಜಿ.

ಆಹಾರ ಧಾನ್ಯವನ್ನು ಅಕ್ಕಿ ಅಥವಾ ಗೋಧಿ ಅಥವಾ ಎರಡೂ ಸೇರಿದಂತೆ, ಪಡೆಯಲು ಅರ್ಹರಿರುತ್ತಾರೆ.

ಆ) ದಿನಾಂಕ 1-6-97 ಕ್ಕೂ ಮುಂಚೆ ರಾಜ್ಯ ಸರ್ಕಾರವು ಹಸಿರು ಕಾರ್ಡ್ ಹೊಂದಿದರಿಗೆ 1 ಕ್ವಿಂಟಾಲ್ ಅಕ್ಕಿಗೆ 367.65 ರೂಪಾಯಿಯ ಸಹಾಯದನವನ್ನು ಭರಿಸುತಿತ್ತು, ಆದೇ ರೀತಿ ಗೋಧಿಗೆ 1 ಕ್ವಿಂಟಾಲ್‌ಗೆ 232.00 ರೂಪಾಯಿಗಳಂತೆ ಸಹಾಯಧನವನ್ನು ಭರಿಸುತ್ತಿತ್ತು.

ಕೇಸರಿ ಕಾರ್ಡ್ ಹೊಂದಿದವರಿಗೆ ಸರ್ಕಾರವು ಯಾವುದೆ ರೀತಿಯ ಸಹಾಯಧನವನ್ನು ಭರಿಸುತ್ತಿರಲಿಲ್ಲ.

ಇ) ಭಾರತ ಸರ್ಕಾರವು ಹಸಿರು ಕಾರ್ಡ್‌ದಾರರಿಗೆ ಅಕ್ಕಿಯನ್ನು ಒಂದು ಕೆ.ಜಿ.ಗೆ. 4.00 ರೂ.ಗಳಂತೆ (3.50 ಪೈ ವಿತರಣಾ ಬೆಲೆ 50 ಪೈ ಸಾಗಾಣಿಕೆ, ಇತರೆ ವೆಚ್ಚ) ಮಾರಾಟ ಮಾಡಬಹುದೆಂದು ಮತ್ತು ಗೋಧಿಯನ್ನು 3.00 ರೂಪಾಯಿಗಳಂತೆ (2.50 ಪೈ ವಿತರಣಾ ಬೆಲೆ 50 ಪೈ ಸಾಗಾಣಿಕೆ ಮತ್ತು ಇತರೆ ವೆಚ್ಚ) ಮಾರಾಟ ಮಾಡಬಹುದೆಂದು ಸೂಚಿಸಿದೆ. ಆದರೆ ರಾಜ್ಯ ಸರ್ಕಾರ ಹಸಿರು ಕಾರ್ಜ್‌ದಾರರಿಗೆ ಅಕ್ಕಿಯನ್ನು ಒಂದು ಕೆ.ಜಿ.ಗೆ 3.50 ರೂಪಾಯಿಗಳಂತೆ ಗೋಧಿಗೆ 2.50 ರೂಪಾಯಿಗಳಂತೆ ಮಾರಾಟ ಮಾಡಲು ಸಿಗಧಿಪಡಿಸಿದೆ. ಇದರಿಂದಾಗಿ ರಾಜ್ಯ ಸರ್ಕಾರ ಪ್ರತಿ ಕೆ.ಜಿ. ಅಕ್ಕಿ ಹಾಗೂ ಗೋದಿಗೆ 50 ಪೈಸೆಯಂತೆ ಸಹಾಯಧನ ರೂಪದಲ್ಲಿ ಬರಿಸುತ್ತಿದೆ.

ಈ) 10 ವರ್ಷಗಳ ಸರಾಸರಿ ಎತ್ತುವಳಿಯನ್ನು ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರವು ರಾಜ್ಯಕ್ಕೆ ನೀಡುತ್ತಿದ್ದ ಆಹಾರಧಾನ್ಯವನ್ನು 1.5 ಲಕ್ಷ ಮೆಟ್ರಿಕ್ ಟನ್‌ಗಳಿಂದ 75ರಿಂದ ಮೆಟ್ರಿಕ್ ರಾಜ್ಯಸರ್ಕಾರಕ್ಕೆ ವರುತ್ತಿದ್ದ ಆಹಾರಧಾನ್ಯಗಳ ಪ್ರಮಾಣದಲ್ಲಿ ಶೇಕಡ 50 ರಷ್ಟು ಕಡಿಮೆಯಾಗಿದೆ. 60.78 ಲಕ್ಷ ಬಡತನ ರೇಖೆಯ ಕೆಳಗಡೆ ಇರತಕ್ಕ ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ 10 ಕೆ.ಜಿ.ಯಂತೆ ಆಹಾರ ಧಾನ್ಯಗಳನ್ನು ನೀಡದ ನಂತರ ಉಳಿದ ಆಹಾರ ಧಾನ್ಯಗಳನ್ನು 13.52 ಲಕ್ಷ ಬಡತನ ರೇಖೆಯ ಮೇಲಿರುವ ಕುಟುಂಬಗಳಿಗೆ (ಕೇಸರಿ ಮತ್ತು ಪೋಟೋ ಕಾರ್ಡ್‌ಗಳು) ಒಂದು ಕುಟುಂಬಕ್ಕೆ 2 1/2 ಕೆ.ಜಿ.ಯಂತೆ ಆಹಾರಧಾನ್ಯಗಳನ್ನು ಕೊಡಲಾಗುತ್ತಿದೆ.

ಶ್ರೀ ಡಿ. ಆರ್. ಪಾಟೀಲ್ : ಅಧ್ಯಕ್ಷರೇ, ಹಸಿರು ಕಾರ್ಡುದಾರರಿಗೆ ಈ ಮೊದಲು ಎಂದರೆ, 1-6-97ರ ಪೂರ್ವದಲ್ಲಿ ಒಂದು ಕ್ವಿಂಟಾಲ್ ಅಕ್ಕಿಗೆ 367-65 ಪೈಸೆ ಸಹಾಯಧನ ಅದೇರೀತಿ ಒಂದು ಕ್ವಿಂಟಾಲ್ ಗೋಧಿಗೆ 256 ರೂಪಾಯ ಸಹಾಯಧನವನ್ನು ಕೊಟ್ಟು 3-20 ಪೈಸೆಗೆ ಒಂದು ಕೆ.ಜಿ. ಅಕ್ಕಿ, 2 ರೂಪಾಯಿಗೆ ಒಂದುಕೆ.ಜಿ. ಗೋಧಿ ಸರಬರಾಜು

ಮಾಡುತ್ತಿದ್ದರು. ಈಗ ಆ ಸಹಾಯಧನವನ್ನು 50 ರೂಪಾಯಿಗಳಿಗೆ ಮೊಟಕುಗೊಳಿಸಿ ಹಸಿರು ಕಾರ್ಡುದಾರರಿಗೆ ಅಕ್ಕಿ ಮತ್ತು ಗೋಧಿಯ ಬೆಲೆಯನ್ನು ಏರಿಸಿದ್ದಾರೆ. ನಮ್ಮ ಆಯವ್ಯಯದೊಳಗೆ ಅಕ್ಕಿ ಮತ್ತು ಹಸಿರು ಕಾರ್ಡುದಾರರಿಗೆ ಗೋಧಿ ಸರಬರಾಜು ಮಾಡಲಿಕ್ಕೆ.

11.10 ಎ ಎಂ

ನಮ್ಮ ಆಯವ್ಯಯದಲ್ಲಿ ಇಟ್ಟಂಥ ಸಹಾಯ ಧನ ಎಷ್ಟು? ಹೆಚ್ಚಿನ ಸಹಾಯ ಧನವನ್ನು ಆಯವ್ಯಯದಲ್ಲಿ ಇಟ್ಟಾಗ್ಯೂ ಕೂಡ ಬೆಲೆ ಏರಿಸಿದ್ದು ಏಕೆ? ಮೊದಲು ಇದ್ದಂಥ ಬೆಲೆ ಮುಟ್ಟಿಕ್ಕೆ ಆಗುತ್ತದೆಯೋ ಇಲ್ಲವೊ?

ಶ್ರೀ ಜಿ. ಬಸವಣ್ಣೆಪ್ಪ : ಸನ್ಮಾನ್ಯ ಅಧ್ಯಕ್ಷರೆ, ಹೊಸ ಪಡಿತರ ಪದ್ಧತಿಯನ್ನು ಕೇಂದ್ರ ಸರ್ಕಾರ ದಿನಾಂಕ : 1-6-1997 ರಿಂದ ಜಾರಿಗೆ ತಂದಿದೆ. ಈ ಹೊಸ ಪಡಿತರ ಪದ್ಧತಿ ಜಾರಿಗೆ ಬಂದ ಮೇಲೆ ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ಮೊದಲು ಕೇಂದ್ರ ಸರ್ಕಾರದವರು ನಮಗೆ ಏನು ಆಹಾರ ಧಾನ್ಯಗಳನ್ನು ಕೊಡುತ್ತಿದ್ದರೋ ಕೇಂದ್ರ ಸರ್ಕಾರ ಹೆಚ್ಚಿಸಿದೆ. ಕಳೆದ 1996-97ನೇ ಸಾಲಿನಲ್ಲಿ 260 ಕೋಟಿ ರೂಪಾಯಿ ಸಹಾಯ ಧನವನ್ನು ನಾವು ಬಜೆಟ್‌ನಲ್ಲಿ ಒದಗಿಸಿದ್ದೆವು. ಈ ಸಾರಿ 190 ಕೋಟಿ ರೂಪಾಯಿಗಳ ಸಹಾಯ ಧನವನ್ನು ಒದಗಿಸಿದ್ದೇವೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯರು ಕೊಟ್ಟಿರುವ ಉತ್ತರದ ಪ್ರಕಾರ ಹೋದ ಸಾರಿ ಒಂದು ಕ್ವಿಂಟಾಲ್ ಅಕ್ಕಿಗೆ 367 ರೂಪಾಯಿ 65 ಪೈಸೆಯನ್ನು ಸಹಾಯ ಧನವಾಗಿ ಕೊಡುತ್ತಿದ್ದರು. ಒಂದು ಕ್ವಿಂಟಾಲ್ ಗೋಧಿಗೆ 256 ರೂಪಾಯಿಗೆ ಮೊಟಕುಗೊಳಿಸಿದ್ದಾರೆ. ಕೇಂದ್ರ ಸರ್ಕಾರದ ಸಹಾಯಧನ ಬರುವಾಗಲೂ ಮತ್ತು ನಮ್ಮ ಆಯವ್ಯಯದಲ್ಲಿ ಹೆಚ್ಚಿನ ಹಣ ಇಟ್ಯಾರ್ಯೂ ಸಹಾಯ ಧನವನ್ನು ಕಡಿಮೆ ಮಾಡಿ ಬೆಲೆ ಏಕೆ ಏರಿಸಲಾಯಿತೆಂದು ನಾನು ಕೇಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ : ರಾಷ್ಟ್ರಾದ್ಯಂತ ಬಡತನ ರೇಖೆಗಿಂತ ಕೆಳಗಡೆ ಇರತಕ್ಕಂಥ ಜನಗಳಿಗೆ ಅಕ್ಕಿಯನ್ನು ಒಂದು ಕೆ.ಜಿ.ಗೆ 3.50 ಪೈಸೆಗೆ ಕೊಡಬೇಕೆಂದು ಕೇಂದ್ರ ಸರ್ಕಾರ ತೀರ್ಮಾನ ಮಾಡಿರುವುದರಿಂದ ಅದರ ಆಧಾರದ ಮೇಲೆ ನಾವೂ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಡಿ. ಆರ್. ಪಾಟೀಲ್ : ಕೇಂದ್ರ ಸರ್ಕಾರವು ಸಬ್ಸಿಡಿ ಕೊಡುವ ಪೂರ್ವದಲ್ಲಿ ರಾಜ್ಯ ಸರ್ಕಾರವೇ ಸಬ್ಸಿಡಿಗೆ ಬೇಕಾದಂಥ ಹಣವನ್ನು ಆಯವ್ಯಯದಲ್ಲಿ ಇಟ್ಟು 2 ರೂಪಾಯಿಗೆ ಒಂದು ಕೆ.ಜಿ. ಗೋಧಿ ಹಾಗೂ 3 ರೂಪಾಯಿ 25 ಪೈಸೆಗೆ ಒಂದು ಕೆ.ಜಿ. ಅಕ್ಕಿ ಕೊಡುವ ವ್ಯವಸ್ಥೆಯನ್ನು ಮಾಡಿತ್ತು.

ಕೇಂದ್ರ ಸರ್ಕಾರ ಸಹಾಯ ಧನವನ್ನು ಕೊಟ್ಟ ಮೇಲೆ ಇನ್ನೂ ಬೆಲೆಯನ್ನು ಇಳಿಸುವ ಬದಲು ಇವರು ಬೆಲೆಯನ್ನು ಏರಿಸುತ್ತಾರಲ್ಲಾ ?

ಶ್ರೀ ಜಿ. ಬಸವಣ್ಣೆಪ್ಪ : ಹೊಸ ಪಡಿತರ ಪದ್ಧತಿ ಜಾರಿಗೆ ಬಂದ ಮೇಲೆ ನಮ್ಮ ರಾಜ್ಯ ಸರ್ಕಾರಕ್ಕೆ 100 ಕೋಟಿ ರೂಪಾಯಿ ಉಳಿತಾಯವಾಗಿದೆ. ಮೊದಲು 260 ಕೋಟಿ ರೂಪಾಯಿಗಳನ್ನು ಸಹಾಯ ಧನವಾಗಿ ಕೊಡುತ್ತಿದ್ದೆವು. ಇದರಿಂದಾಗಿ ಎ.ಪಿ.ಎಲ್. ಫ್ಯಾಮಿಲ್‌ಗಳಿಗೆ ಆಹಾರ ಧಾನ್ಯದಲ್ಲಿ ಹೆಚ್ಚು ಕಡಿತ ಉಂಟಾಗಿದೆ. ಅದಕ್ಕೋಸ್ಕರ ಮತ್ತೆ 70 ರಿಂದ 80 ಕೋಟಿ ರೂಪಾಯಿಗಳಷ್ಟು ಸಹಾಯ ಧನವನ್ನು ಕೊಡುವುದಕ್ಕೆ ರಾಜ್ಯ ಸರ್ಕಾರ ಈಗಾಗಲೇ ಕಾರ್ಯಕ್ರಮ ರೂಪಿಸಿಕೊಂಡಿದೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೇ, ಮಾನ್ಯ ಸದಸ್ಯರು ಕೇಳುತ್ತಿರುವುದೇನೆಂದರೆ, ಕೇಂದ್ರ ಸರ್ಕಾರದವರು ಸಹಾಯ ಧನವನ್ನು ಕೊಡುವುದಕ್ಕೆ ಮೊದಲು ರಾಜ್ಯ ಸರ್ಕಾರವೇ ಹೆಚ್ಚಿನ ಸಹಾಯ ಧನವನ್ನು ಕೊಡುತ್ತಿತ್ತು. ನಿಮ್ಮ ನೆರವಿಗೆ ಅವರೂ ಬಂದು ಸಹಾಯ ಧನವನ್ನು ಕೊಟ್ಟಾಗ ಬೆಲೆ ಇನ್ನೂ ಕಡಿಮೆ ಆಗಬೇಕೇ ಹೊರತು, ನೀವು ಕೊಡತಕ್ಕಂಥ ಸಹಾಯ ಧನವನ್ನು ಕಡಿತ ಮಾಡಿ ಬೆಲೆ ಏರಿಸುವ ಹಾಗೆ ಮಾಡಿದ್ದೀರಿ, ಇದು ನ್ಯಾಯ ಅಲ್ಲ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಜಿ. ಬಸವಣ್ಣೆಪ್ಪ : ಬೆಲೆ ಏರಿಕೆಯನ್ನು ಕೇಂದ್ರ ಸರ್ಕಾರ ಮಾಡಿದೆ.

ಅಧ್ಯಕ್ಷರು : ಕೇಂದ್ರ ಸರ್ಕಾರ ಮಾಡಿರುವುದನ್ನು ಒಂದು ಕಡೆ ಇಡಿ. ರಾಜ್ಯ ಸರ್ಕಾರದವರು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿ ಕೊಡುತ್ತಿದ್ದಂಥ ಸಹಾಯ ಧನವನ್ನು ಅಷ್ಟೇ ಇಟ್ಟಿದ್ದೀರೋ? ಏರಿಸಿದ್ದೀರೋ ? ಕಡಿಮೆ ಮಾಡಿದ್ದೀರೋ ?

ಶ್ರೀ ಜಿ. ಬಸವಣ್ಣೆಪ್ಪ : ಕಡಿಮೆ ಮಾಡಿದ್ದೇವೆ.

ಅಧ್ಯಕ್ಷರು : ಅದನ್ನೇ ಅವರು ಕೇಳುತ್ತಿರುವುದು. ಅವರ ಪ್ರಶ್ನೆ ಅದೇ ಅಲ್ಲವೇ ?

ಶ್ರೀ ಜಿ. ಬಸವಣ್ಣೆಪ್ಪ : ಕೇಂದ್ರ ಸರ್ಕಾರ 1 ಕೆ.ಜಿ.ಗೆ 4 ರೂಪಾಯಿ ಬೆಲೆನಿಗದಿ ಮಾಡಿದ್ದಾರೆ, ನಾವು ಅದಕ್ಕೆ 50 ಪೈಸೆ ಸಬ್ಸಿಡಿ ಕೊಟ್ಟು 3 ರೂಪಾಯಿ 50 ಪೈಸೆಗೆ ಮಾರಾಟ ಮಾಡುತ್ತಿದ್ದೇವೆ.

ಶ್ರೀ ಡಿ. ಆರ್. ಪಾಟೀಲ್ : ಯಾವ ಪ್ರಮಾಣದಲ್ಲಿ ಕಡಿಮೆ ಮಾಡಿದ್ದೀರಿ? ಒಂದು ಕೆ.ಜಿ. ಅಕ್ಕಿ ಅಥವಾ ಒಂದು ಕೆ.ಜಿ. ಗೋಧಿಯನ್ನು ಹಸಿರು ಕಾರ್ಡ್‌ದಾರರಿಗೆ ಯಾವ ರೇಟ್‌ನಲ್ಲಿ ಮಾರಾಟ ಮಾಡಬೇಕೆಂದು ಬಜೆಟ್‌ನಲ್ಲಿ ಸಹಾಯ ಧನವನ್ನು ಇಡಲಾಗಿದೆ?

ಶ್ರೀ ಜಿ. ಬಸವಣ್ಣೆಪ್ಪ : ಬಡತನ ರೇಖೆಗಿಂತ ಕೆಳಗೆಡೆ ಇರತಕ್ಕಂಥವರು 28 ಲಕ್ಷ ಜನರಿದ್ದಾರೆಂದು ಕೇಂದ್ರ ಸರ್ಕಾರ ಹೇಳಿದೆ.

ಅಧ್ಯಕ್ಷರು : ಇದಕ್ಕೆ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ. ?

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿತ್ತು. ಒಂದೊಂದು ರಾಜ್ಯದ ಬೇಡಿಕೆ ಒಂದೊಂದು ರೀತಿ ಇದೆ. ಪಶ್ಚಿಮ ಬಂಗಾಳದವರು ಒಂದು ಫ್ಯಾಮಿಲಿಗೆ 30 ಕೆ.ಜಿ. ಅಕ್ಕಿ ಕೊಡಬೇಕೆಂದು ಕೇಳುತ್ತಿದ್ದಾರೆಂದು ಪ್ರಧಾನ ಮಂತ್ರಿಗಳು ಹೇಳಿದರು. ನಮ್ಮ ಲೆಕ್ಕಾಚಾರದ ಪ್ರಕಾರ ನಮ್ಮ ರಾಜ್ಯದಲ್ಲಿ 62 ಲಕ್ಷ ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ಪಡಿತರ ವ್ಯವಸ್ಥೆ ಮೂಲಕ ಹಂಚಬೇಕಾಗಿದೆ. ಇದಕ್ಕೆ ಕೇಂದ್ರ ಸರ್ಕಾರದವರು ಏನು ಡಾಟಾ ಉಪಯೋಗಿಸಿದ್ದಾರೋ ಗೊತ್ತಿಲ್ಲ. It has been brought down to 28 lakhs.

ಹಾಗಾಗಿ 62 ಲಕ್ಷ ಫ್ಯಾಮಿಲಿಗಳಿಗೆ ನಾವು ಏನು ಮೊದಲು ಸಬ್ಸಿಡಿ ಕೊಡುತ್ತಿದ್ದೆವು ಅದು 260 ಕೋಟಿ ರೂಪಾಯಿ ಆಗುತ್ತಿತ್ತು. ತಾವು ಹೇಳಿದ ಹಾಗೆ ಕೇಂದ್ರ ಸರ್ಕಾರ ನಮ್ಮ ನೆರವಿಗೆ ಬಂದಿದೆ. ಅದರಿಂದಾಗಿ ಸಬ್ಸಿಡಿಯನ್ನು 260 ಕೋಟಿ ರೂಪಾಯಿಂದ 190 ಕೋಟಿ ರೂಪಾಯಿಗಳಿಗೆ ಇಳಿಸಿ 70 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೇವೆ. ಆದರೆ, ಅವರು ಕೊಡುತ್ತಿರುವ ಧಾನ್ಯದ ಪ್ರಮಾಣ ಬಹಳ ಕಡಿಮೆಯಾಗಿದೆ. ಮೊದಲು ನಾವು ಒಂದು ತಿಂಗಳಿಗೆ 1 ಲಕ್ಷದ 20 ಸಾವಿರ ಟನ್ ಆಹಾರ ಧಾನ್ಯವನ್ನು ಕಡಿಮೆ ಮಾಡಿದ್ದೇವೆ. ಆದರೆ, ಅವರು ಕೊಡುತ್ತಿರುವ ಧಾನ್ಯದ ಪ್ರಮಾಣ ಬಹಳ ಕಡಿಮೆಯಾಗಿದೆ. ಮೊದಲು ನಾವು ಒಂದು ತಿಂಗಳಿಗೆ 1 ಲಕ್ಷದ 20 ಸಾವಿರ ಟನ್ ಆಹಾರ ಧಾನ್ಯವನ್ನು ಲಿಫ್ಟ್ ಮಾಡುತ್ತಿದ್ದೆವು. ಇವತ್ತು ಅದನ್ನು 75 ಸಾವಿರ ಟನ್‌ಗೆ ಇಳಿಸಿದ್ದಾರೆ. ಆದ್ದರಿಂದ, ಈ ಬಗ್ಗೆ ನಾನು ಈಗಾಗಲೇ ಪ್ರಧಾನ ಮಂತ್ರಿಯವರಲ್ಲಿ ಮನವಿ ಮಾಡಿಕೊಂಡಿದ್ದೇನೆ. ಈಗ ಲಭ್ಯವಿರುವ ಆಹಾರ ಧಾನ್ಯದಲ್ಲಿ ಬಿಲೋದಿ ಪಾವರ್ಟಿಲೈನ್ ಕೆಳಗಡೆ ಇರತಕ್ಕಂಥ ಜನಗಳಿಗೆ

10 ಕೆ.ಜಿ. ಅಕ್ಕಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಬೇರೆ ರೇಷನ್ ಕಾರ್ಡ್‌ದಾರರಿಗೆ ಎರಡೂವರೆ ಕೆ.ಜಿ. ಅಕ್ಕಿ ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಗಮನ ಸೆಳೆಯುವುದಕ್ಕೋಸ್ಕರ ಮಿಡ್ಲ್‌ಕ್ಲಾಸ್‌ಗೆ ಸೇರಿರತಕ್ಕಂಥ ಆಫೀಸರ್‌ಗಳು ಸಹ ಬಂದು ಹೇಳಿದರು. ಆದ್ದರಿಂದ. We are at it and I am going to make appeal to the Prime Minister again.

ನಮ್ಮ ರಾಜ್ಯಕ್ಕೆ ಹೆಚ್ಚು ಧಾನ್ಯ ಬರದೇ ಇದ್ದರೆ ಈ ಕಷ್ಟ ಇರುತ್ತದೆ. ಆದ್ದರಿಂದ ಹೆಚ್ಚು ಧಾನ್ಯ ಬರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ವಿಷಯ ಇದೆ. ಅವರು ಕೇಳುವುದು ಒಂದು ಕಡೆ ಪ್ರೈಸ್, ಇವರು ಹೇಳುವುದು ಕ್ವಾಂಟಿಟಿ. 1 ಲಕ್ಷ 25 ಸಾವಿರ ಟನ್ ಆಹಾರ ಧಾನ್ಯಕ್ಕೆ ನಮ್ಮ ರಾಜ್ಯದ್ದು ಮೊದಲ ಬೇಡಿಕೆ ಇತ್ತು. ಈಗ 75 ಸಾವಿರ ಟನ್‌ಗೆ ಇಳಿಸಿರುವುದರಿಂದ ಪ್ರಾಮೋರ್ಷನ್ ಆಗಿ ನಾವು ಕ್ವಾಂಟಿಟಿ ಕಡಿಮೆ ಮಾಡಿದ್ದೇವೆ ಎಂದು ಹೇಳುವುದು ಒಂದು ಪ್ರಶ್ನೆ. ಅವರು ಕೇಳುತ್ತಿರುವುದೇನೆಂದರೆ, ಈ ಹಿಂದೆ, ರಾಜ್ಯ ಸರ್ಕಾರವೇ ಸಬ್ಸಿಡಿ ಕೊಡುವಾಗ 2 ರೂಪಾಯಿಗೆ ಒಂದು ಕೆ.ಜಿ. ಗೋಧಿ, 3 ರೂಪಾಯಿ 50 ಪೈಸೆಗೆ ಒಂದು ಕೆ.ಜಿ. ಅಕ್ಕಿ ಪಡಿತರ ವ್ಯವಸ್ಥೆಯಲ್ಲಿ ಸಿಗುತ್ತಿತ್ತು. ಕೇಂದ್ರ ಸರ್ಕಾರ ಸಬ್ಸಿಡಿ ಕೊಡುವುದಕ್ಕೆ ಪ್ರಾರಂಭಿಸಿದ ಮೇಲೆ ಎರಡು ರೂಪಾಯಿ ಇದ್ದ ಕಡೆ ಒಂದು ರೂಪಾಯಿ 50 ಪೈಸೆ ಆಗಬೇಕೇ ಹೊರತು ಜಾಸ್ತಿ ಆಲ್ಲ ನಮ್ಮರಾಜ್ಯ ಸರ್ಕಾರ ಕಮಿಟ್‌ಮೆಂಟ್‌ಗೆ ನಿಲ್ಲಬೇಕಲ್ಲಾ ? ಸಬ್ಸಿಡಿ ಕೊಡುತ್ತೇವೆಂದು ಸರ್ಕಾರ ಹೇಳಿ ಕೊಟ್ಟ ಮೇಲೆ ಈಗ ಸಬ್ಸಿಡಿಯನ್ನು ಏಕೆ ತೆಗೆಯಬೇಕಾಗಿತ್ತು ?

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಕೊಟ್ಟಿರುವ ಉತ್ತರದ ಪ್ರಕಾರ ನಮ್ಮ ರಾಜ್ಯದಲ್ಲಿ 43.25 ಲಕ್ಷ ಬಡತನ ರೇಖೆಗಿಂತ ಮೇಲಿರುವ ಕಾರ್ಡ್‌ದಾರರುಗಳಿಗೆ ಎರಡೂವರೆ ಕೆ.ಜಿ. ಅಕ್ಕಿಯನ್ನು ಕೊಡಲಾಗುತ್ತದೆಂದು ಹೇಳಿದ್ದಾರೆ. ಬೆಂಗಳೂರು ಮಹಾನಗರದ ಕಾರ್ಡ್‌ದಾರರುಗಳಿಗೆ ಈ ಮೊದಲು 21 ಕೆ.ಜಿ. ಅಕ್ಕಿ ಕೊಡುತ್ತಿದ್ದಂಥ ಸಂದರ್ಭದಲ್ಲಿ ಈಗ ಎರಡೂವರೆಗೆ ಕೆ.ಜಿ. ಅಕ್ಕಿಯನ್ನು ಒಂದು ರೀತಿ ಬಿಕ್ಷೆಯಂತೆ ಕೊಡುತ್ತಿರುವುದು ಜನರುಗಳಿಗೆ ಮಾಡಿದಂಥ ಅಪಮಾನ ತಾನೆ? ಈಗ ನಾನು ಕೇಳುತ್ತಿರುವುದೇನೆಂದರೆ, ಕೇಸರಿ ಮತ್ತು ಸಾಮಾನ್ಯ ಕಾರ್ಡ್‌ದಾರರುಗಳಿಗೆ ಮೊದಲಿನಂತೆ ಅಕ್ಕಿಯ ಪ್ರಮಾಣವನ್ನು ಹೆಚ್ಚು ಮಾಡಿ ಕೊಡಬೇಕು. ಅದನ್ನು ಈ ತಿಂಗಳಿನಿಂದಲೇ ಕೊಡಬೇಕು. ಎರಡೂವರೆ ಕೆ.ಜಿ. ಅಕ್ಕಿಯನ್ನು ಭಿಕ್ಷೆಯ ರೀತಿ ಕೊಡುವ

ಬದಲು ಅದನ್ನು ಕೊಡದೆ ಇರುವುದೇ ಒಳ್ಳೆಯದು. ಮೊದಲಿನಂತೆ ಕೊಡುವುದ್ದಾರೆ ಯಾವಾಗಿನಿಂದ ಕೊಡತ್ತೀರೆಂದು ಹೇಳಬೇಕು.

ಶ್ರೀ ಜಿ. ಬಸವಣ್ಣೆ ಪ್ಪ : ಈಗಾಗಲೇ ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆದಿದ್ದೇವೆ. ಇದರ ಜೊತೆಗೆ ಮಾನ್ಯ ಮುಖ್ಯ ಮಂತ್ರಿಯವರು ಪ್ರಧಾನ ಮಂತ್ರಿಯವರನ್ನು ಮತ್ತು ಕೇಂದ್ರ ಆಹಾರ ಮಂತ್ರಿಯವರನ್ನು ಭೇಟಿ ಮಾಡಿ ಪ್ರಸ್ತಾವ ಮಾಡಿದ್ದಾರೆ. ಇಂಟರ್ ಸ್ಟೇಟ್ ಕಾನ್ಸಿಲ್‌ನಲ್ಲಿ ಈ ಬಗ್ಗೆ ಮಾತನಾಡಿ ಹಿಂದೆ ಕೊಡುತ್ತಿದ್ದ ರೀತಿಯಲೇ 1 ಲಕ್ಷ 20 ಸಾವಿರ ಟನ್ ಆಹಾರ ಧಾನ್ಯವನ್ನುಕೊಡಬೇಕೆಂದು ಒತ್ತಾಯ ಮಾಡಲಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ವಿಶೇಷ ಸಭೆಯನ್ನು ಕರೆದು ಚರ್ಚೆ ಮಾಡಿ ತೀರ್ಮಾನ ಮಾಡಲಾಗುತ್ತದೆಂದು ಮಾನ್ಯ ಪ್ರಧಾನ ಮಂತ್ರಿಯವರು ಭರವಸೆ ಕೊಟ್ಟಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : 43 ಲಕ್ಷದ 52 ಸಾವಿರ ಕುಟುಂಬಗಳಿಗೆ ಮೊದಲು 21 ಕೆ.ಜಿ. ಅಕ್ಕಿ ಕೊಡುತ್ತಿದ್ದಂಥ ಜಾಗದಲ್ಲಿ ಎರಡೂವರೆ ಕೆ.ಜಿ. ಅಕ್ಕಿ ಕೊಡುವುದನ್ನು ಕೇಂದ್ರದಲ್ಲಿ ಅವರದೇ ಪಕ್ಷದ ಸರ್ಕಾರದ ಇದ್ದಾಗ ಈ ಯೋಜನೆ ಜಾರಿಗೆ ಬಂತು. ನಾನು ಕ್ಲಾರಿಫೈ ಮಾಡಿಕೊಂಡಿರುವ ಪ್ರಕಾರ ಈ ಬಗ್ಗೆ ಯಾವುದೇ ರಾಜ್ಯದಲ್ಲಿ ಇಷ್ಟು ತರಾತುರಿಯಲ್ಲಿ ಸುತ್ತೋಲೆಯನ್ನು ಹೊರಡಿಸಲೇ ಇಲ್ಲ. ಅವರು ಹೇಗೋ ಮ್ಯಾನೇಜ್ ಮಾಡುತ್ತಿದ್ದಾರೆ. ನೀವು, ಕೇಂದ್ರ ಸರ್ಕಾರದ ಆಜ್ಞೆಬಂದ ತಕ್ಷಣ ಸುತ್ತೋಲೆಯನ್ನು ಹೊರಡಿಸಿ ಈ ರೀತಿ ಎರಡೂವರೆ ಕೆ.ಜಿ. ಕೊಡುವ ವ್ಯವಸ್ಥೆಯನ್ನು ಜಾರಿಗೆ ತಂದುಬಿಟ್ಟಿರಿ. ಇದು ಅವರಿಗೆ ಗೌರವ ತರತಕ್ಕಂಥ ಸಂಗತಿಯೇ ಅಲ್ಲ. ಸುತ್ತೋಲೆ ಹೊರಡಿಸುವುದಕ್ಕೆ ಮೊದಲು ಹತ್ತು ಸಾರಿ ಯೋಚನೆ ಮಾಡ ಬೇಕಾಗಿತ್ತು. ಅವರು ಪ್ರಧಾನ ಮಂತ್ರಿಯವರ ಹತ್ತಿರ ಮಾತನಾಡಲಿ. ಅಲ್ಲಿಯವರೆಗೆ 43 ಲಕ್ಷ ಕುಟುಂಬದವರಿಗೆ ಕೊಡುತ್ತಿರತಕ್ಕಂಥ ಎರಡೂವರೆ ಕೆ.ಜಿ. ಅಕ್ಕಿಯ ಭಿಕ್ಷೆಯನ್ನು ನಿಲ್ಲಿಸಿ ಎಷ್ಟು ಪ್ರಮಾಣದಲ್ಲಿ ಕೊಡಬೇಕೆಂಬ ಬಗ್ಗೆ ಯೋಜನೆ ಮಾಡಲಾಗಿದೆ. ಹಾಗೂ ಯಾವಾಗಿನಿಂದ ಕೊಡಲಾಗುತ್ತದೆ?

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮೊದಲು ಯಾವ ರೀತಿ ಕೊಡಲಾಗುತ್ತಿತ್ತೋ ಅದೇ ರೀತಿ ಕೊಡಬೇಕೆನ್ನುವುದೇ ಈ ಸರ್ಕಾರದ ಉದ್ದೇಶ. ಬಂಗಾಲದವರು 30 ಕೆ.ಜಿ. ಕೇಳಿದ್ದಾರೆ, ಅದಕ್ಕಾಗಿ ರಾಷ್ಟ್ರದಲ್ಲಿ ಒಂದು ಯೂನಿಫಾರ್ಮ್ ಪಾಲಿಸಿ ಮಾಡಬೇಕೆಂದು ಪ್ರಧಾನಿಯವರು ಹೇಳಿದ್ದಾರೆ. ಪೈಸ್ ವಿಷಯದಲ್ಲಿ ಗ್ರೀನ್ ಕಾರ್ಡ್ ಹೋಲ್ಡ್‌ರ್ಸ್ ಗೆ 3 ರೂಪಾಯಿ 50 ಪೈಸೆ ಎಂದು ಹೇಳಿಬಿಟ್ಟಿದ್ದಾರೆ. ಆಮೇಲೆ ಸ್ಯಾಫ್ರನ್ ರೇಷನ್‌ದಾರರಿಗೆ ಅವರ ಕ್ಯಾಲಿಕ್ಯುಲೇಷನ್ ಪ್ರಕಾರ 68 ಲಕ್ಷ ದಿಂದ 28ಲಕ್ಷಕ್ಕೆ

ತಿಳಿದಿರುವುದರಿಂದ 40 ಲಕ್ಷ ಫ್ಯಾಮಿಲಿಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಾವು ಸಬ್ಸಿಡಿಯನ್ನು 260 ಕೋಟಿ ರೂಪಾಯಿಗಳಿಗೇ ಏರಿಸಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ಬರತಕ್ಕಂಥ ನೆರವಿನಿಂದ ನಮಗೇನೂ ಭಾರ ಕಡಿಮೆಯಾಗಲಿಲ್ಲ. ಆ ಒಂದು ದೃಷ್ಟಿಯಿಂದ ಕೇಂದ್ರ ಸರ್ಕಾರದೊಡನೆ ನಾವು ಮಾತುಕತೆ ನಡೆಸುತ್ತಾ ಇರುವುದು ನಮ್ಮ ಸರ್ಕಾರ ಇರಲಿ ಅಥವಾ ನಿಮ್ಮ ಸರ್ಕಾರ ಇರಲಿ ಅದು

ಶ್ರೀ ಬಿ. ಎಸ್. ಯಡಿಯೂರಪ್ಪ : ಈಗ ಸಬ್ಸಿಡಿ ಕೊಟ್ಟು ಅದನ್ನು ಮುಂದುವರಿಸಿ. ಆಮೇಲೆ ಇದರ ಬಗ್ಗೆ ಮಾತನಾಡೋಣ. ರಾಜ್ಯ ಸರ್ಕಾರ ಸಬ್ಸಿಡಿ ಕೊಡಿ ಎಂದು.

ಶ್ರೀ ಜೆ. ಹೆಚ್. ಪಟೇಲ್ : ಕೇಂದ್ರದಿಂದ ಅಕ್ಕಿ ಬರಬೇಕಾಲ್ಲಾ

ಶ್ರೀ ಬಿ. ಎಸ್. ಯಡಿಯೂರಪ್ಪ : ಇದನ್ನು ಮಾಡುವುದು ಗೊತ್ತಿದ್ದು, ಪೂರ್ವ ಭಾವಿಯಾಗಿ ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು, ಇದನ್ನು ಮುಂದಾಲೋಚನೆ ಪ್ರಧಾನಿಯವರ ಜೊತೆ ಮಾತನಾಡುವಂತಹ ಕೆಲಸದಲ್ಲಿ ತಾವು ವಿಫಲರಾಗಿದ್ದೀರಿ. ಈಗಲಾದರೂ ತಕ್ಷಣ ಆ ಕಡೆಗೆ ಗಮನಕೊಟ್ಟ ಸರಿಯಾದ ವ್ಯವಸ್ಥೆ ಮಾಡಿ ಎಂದು ನನ್ನ ಆಗ್ರಹ.

ಅಧ್ಯಕ್ಷರು : ಮಾಡುತ್ತೇನೆಂದು ಹೇಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಇದೇ ಹಸಿರುಕಾರ್ಡ್‌ನ್ ರೇಟ್‌ನಲ್ಲಿ ಆಸ್ಪತ್ರೆಗಳಿಗೆ, ಬಡ ರೋಗಿಗಳಿಗೆ ಆಹಾರವನ್ನು ಒದಗಿಸುವುದಕ್ಕೆ ಅಕ್ಕಿ ಕೊಡುತ್ತಾ ಇದ್ದೀರಿ, ಪೋಲೀಸರಿಗೆ ಅಕ್ಕಿ ಕೊಡುತ್ತಾಇದ್ದೀರಿ ಮತ್ತು ಕಾನ್ಸ್‌ಟೇಬಲ್‌ರವರಿಗೂ ಅಕ್ಕಿ ಕೊಡುತ್ತಾ ಇದ್ದೀರಿ. ಇವೆರಡನ್ನೂ ಕೂಡ ನಿಲ್ಲಿಸಿದ್ದೀರಿ. ಹಾಸ್ಟೆಲ್‌ಗಳಿಗೂ ಕೂಡ ಅಕ್ಕಿ ಕೊಡುವುದನ್ನು ನಿಲ್ಲಿಸಿದ್ದೀರಿ. ನಿಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ 3 ರೂಪಾಯಿಗೆ 1 ಕೆ. ಜಿ. ಅಕ್ಕಿ ಕೊಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಎಲ್ಲದರಲ್ಲೂ ವಿಫಲ ಆಗಿದೆ. ನಿಮ್ಮ ಸರ್ಕಾರದ ವಿಫಲತೆಯನ್ನು ನೀವು ಒಪ್ಪಿಕೊಳ್ಳುತ್ತೀರೋ? ಆ ಮೇಲೆ ಪೋಲೀಸ್‌ನವರಿಗೆ ಮತ್ತು ಆಸ್ಪತ್ರೆಗಳಿಗೆ ಅಕ್ಕಿ ಒದಗಿಸುವಂಥದನ್ನು ಮಾಡುತ್ತೀರಾ? ಜನ ಕೇಳದೆ ಇರುವಂಥದನ್ನು ನೀವು ಕೊಡುತ್ತೀರಿ, ಕೇಳುವುದನ್ನು ಕೊಡುವುದಿಲ್ಲ. ಸ್ಕೂಲ್‌ನಲ್ಲಿ ಹುಡುಗರಿಗೆ 3 ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದೀರಿ. ನನ್ನ ಮಗನು 3ಕೆ. ಜಿ. ಅಕ್ಕಿಯನ್ನು ತಂದಿದ್ದಾನೆ. ಅವರಿಗೆಲ್ಲಾ ಕೊಡುವುದಕ್ಕೆ ಶುರು ಮಾಡಿದ್ದೀರಿ ಇವರಿಗೆಲ್ಲಾ ನಿಲ್ಲಿಸಿದ್ದೀರಿ. ಇವರಿಗೆ 2.5 ಕೆ.ಜಿ. ಅಕ್ಕಿ ಸ್ಕೂಲ್ ಮಕ್ಕಳಿಗೆ 3 ಕೆ.ಜಿ. ಅಕ್ಕಿ ಇದು ಯಾವ ನ್ಯಾಯ? ನಿಮ್ಮ ಸರ್ಕಾರ ಯಾವ ರೀತಿ ನಡೆಯುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ. ವಿ. ಸದಾನಂದಾಗೌಡ : ಇಷ್ಟರತನಕ ಹಸಿರು ಕಾರ್ಡ್ ಮತ್ತು ಕೇಸರಿ ಕಾರ್ಡ್‌ನ್ನು ಸರಿಯಾದ ರೀತಿಯಲ್ಲಿ ಜನರಿಗೆ ಕೊಟ್ಟಿಲ್ಲ. ಗ್ರಾಮಾಂತರ ಮಟ್ಟದಲ್ಲಿ ಪಡಿತರ ವಿತರಣೆಯ ಏನು ಕಡಿಮೆ ಮಾಡಿದ್ದಾರೆಲ್ಲಾ, ಹಸಿರು ಕಾರ್ಡ್ ಮತ್ತು ಕೇಸರಿ ಕಾರ್ಡ್ ಸಾವಿರಾರು ಜನರಿಗೆ ಇನ್ನೂ ಕೂಡ ನಮಲ್ಲಿ ಸಿಕ್ಕಿಲ್ಲ ಎಂದು ಕಂಪ್ಲೇಂಟ್ ಇದೆ. ಸರ್ಕಾರವು ಪದೇ ಪದೇ ಕಳಿದ ಸದನದಲ್ಲೂ ಕೂಡ ಹೇಳಿತ್ತು. ತಕ್ಷಣ ಒಂದು ತಿಂಗಳಿನಲ್ಲಿ ನಾವು ಎಲ್ಲರಿಗೂ ಕಾರ್ಡ್ ವಿತರಣೆ ಮಾಡುತ್ತೇವೆಂದು ಹೇಳುತ್ತಿದ್ದರು. ಇನ್ನೂ ಕೂಡ ಗ್ರಾಮಾಂತರ ಮಟ್ಟದಲ್ಲಿ ಸಾವಿರಾರು ಜನರಿಗೆ ಕಾರ್ಡ್ ಸಿಕ್ಕಿಲ್ಲ. ಈಗ ಅಕ್ಕಿಯೂ ಸಿಗುವುದಿಲ್ಲ, ಕಾರ್ಡ್ ಸಿಕ್ಕಿಲ್ಲ. ಸರ್ಕಾರ ಇದರ ಬಗ್ಗೆ ಏನು ಕ್ರಮಕೈಗೊಂಡಿದೆ? ಪದೇ ಪದೇ ಈ ಸರ್ಕಾರ ಈ ರೀತಿ ಏಕೆ ಹೇಳುತ್ತದೆ? ಸರ್ಕಾರ ಅದನ್ನು ಇಲ್ಲಿ ಸ್ಪಷ್ಟ ಪಡಿಸಬೇಕು.

ಶ್ರೀ ಡಿ. ಆರ್. ಪಾಟೀಲ್ : ಇಲ್ಲಿ 2 ಇಷ್ಯೂಸ್ ಇದೆ. ಮಾನ್ಯ ಖರ್ಗೆರವರು ಅದನ್ನು ಸರಿಯಾಗಿ ಹೇಳಿದರು. ಅದನ್ನು ಪರಪಸ್ಲಿ ಡೈವರ್ಸ್ ಮಾಡುತ್ತಾರೇನೋ ಗೊತ್ತಿಲ್ಲ. ಒಂದು ಹಸಿರು ಕಾರ್ಡ್‌ದಾರರಿಗೆ ನೀವು ಅಕ್ಕಿ, ಗೋಧಿಯನ್ನು 3.20 ಪೈಸೆ, 2 ರೂಪಾಯಿಗಳ ಹಾಗೆ ಜೂನ್ ಒಂದನೇ ತಾರೀಖಿನಿಂದ ಮೊದಲು ಕೊಡುತ್ತಿದ್ದೀರಿ, ಆಗ ಕೇಂದ್ರ ಸರ್ಕಾರದ ಇಷ್ಯೂ ಪ್ರೈಸ್ ಏನು ಇತ್ತು ಈಗ ಏನು ಇಷ್ಯೂ ಪ್ರೈಸ್ ಇದೆ? ಈಗ ಬಡ್ಜೆಟ್ ಪ್ರಾವಿಷನ್ ಮಾಡಿದ ಮೇಲೂ ಈ ರೇಟ್‌ನಲ್ಲಿ ಕೊಡಲಿಕ್ಕೆ ನಿಮಗೆ ಇರುವ ತೊಂದರೆ ಏನು? ಇದು ಮೊದಲನೇ ಇಷ್ಯೂ. ಎರಡನೆಯ ಇಷ್ಯೂ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಕೇಸರಿ ಕಾರ್ಡ್‌ದಾರರಿಗೆ 2.5 ಕೆ.ಜಿ. ಇದೆಯಲ್ಲಾ ಅದನ್ನು ಹೆಚ್ಚು ಮಾಡಬೇಕಾದರೆ ನೀವು ಪಶ್ಚಿಮ ಬಂಗಾಳ, ಕೇರಳ ಸರ್ಕಾರಗಳ ಹಾಗೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿ ಹೆಚ್ಚಿನ ಅಕ್ಕಿ, ಗೋಧಿ ತರಸಬೇಕಾಗುತ್ತದೆ. 2ನೇ ಇಷ್ಯೂಸ್ ನಾನು ಕೇಳುತ್ತಿರುವುದು ಹಸಿರುಕಾರ್ಡ್‌ದಾರರಿಗೆ ಮೊದಲು ಇದ್ದ ರೇಟ್‌ಗಳಿಗೆ ಮಾರಾಟ ಮಾಡಲಿಕ್ಕೆ ನಿಮಗೆ ಇರುವ ತೊಂದರೆ ಏನು? ಅವರಿಗೆ ಏಕೆ ಹೊಡತ ಕೊಡುತ್ತಿದ್ದೀರಿ ಈಗ?

ಅಧ್ಯಕ್ಷರು : ಸಂದನಂದಗೌಡರು ಮತ್ತು ಪಾಟೀಲ್ ಹೇಳಿದಕ್ಕೆ ಒಂದೇ ಸಲ ಉತ್ತರ ಕೊಡಿ. ಬಹಳ ಸಮಯ ತೆಗೆದುಕೊಳ್ಳಬೇಡಿ.

ಶ್ರೀ ಜಿ. ಬಸವಣ್ಣೆಪ್ಪ : ಕೇಂದ್ರ ಸರ್ಕಾರ ಇಷ್ಯೂ ಪ್ರೈಸ್‌ನಲ್ಲಿ 7.05 ಪೈಸೆ ಇದ್ದುದ್ದನ್ನು 8.10 ಪೈಸ್ ಮಾಡಿದ್ದರಿಂದ ನಾವು ಹಸಿರು ಕಾರ್ಡ್‌ದಾದರಿಗೆ ಕೇವಲ 30 ಪೈಸೆ ಜಾಸ್ತಿ ಮಾಡಿದ್ದೇವೆ. 3.20 ರಿಂದ 3.50 ಪೈಸೆಗೆ ಮಾಡಿದ್ದೇವೆ. 4 ರೂಪಾಯಿಗೆ ಮಾರಾಟ

ಮಾಡಿ ಎಂದು ಆದೇಶ ಇದ್ದುದನ್ನು ರಾಜ್ಯ ಸರ್ಕಾರ 50 ಪೈಸೆ ಸಹಾಯಧನ ಕೊಟ್ಟು 3.50 ಪೈಸೆಗೆ ಮಾಡಿದ್ದೇವೆ. ನಮ್ಮ ಸ್ನೇಹಿತರು ಹೇಳಿದಹಾಗೆ ವಿದ್ಯಾರ್ಥಿ ನಿಲಯಗಳಿಗೆ ನಾವು ಅಕ್ಕಿಯನ್ನು ಕೊಡುವುದನ್ನು ನಿಲ್ಲಿಸಿಲ್ಲ ಮತ್ತು ಪೋಲೀಸರಿಗೆ ಕೊಡುವುದನ್ನು ನಿಲ್ಲಿಸಿಲ್ಲ. ಆಸ್ಪತ್ರೆಗಳಿಗೆ ಕೊಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದೇವೆ. ಅದನ್ನು ಆದಷ್ಟು ಬೇಗ ಸರಿಪಡಿಸುತ್ತೇವೆ. ಮತ್ತು ಹಿಂದುಳಿದ ವರ್ಗದ ಹಾಸ್ಟೆಲ್‌ಗಳಿಗೂ ಸಹ ನಾವು ಕೊಡುತ್ತಾ ಇದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಹಸಿರು ಕಾರ್ಡ್‌ಗಳು ಬಹಳ ಜನಗಳಿಗೆ ಸಿಕ್ಕಿಲ್ಲ ಎನ್ನುವ ಒಂದು ವಾದವನ್ನು ಇಟ್ಟಿದ್ದಾರೆ. ಈಗಾಗಲೇ ಇದರ ಬಗ್ಗೆ ಸಚಿವ ಸಂಪುಟದಲ್ಲಿ ತೀವ್ರವಾಗಿ ಚರ್ಚೆ ಮಾಡಿ ಸುಮಾರು 5-6 ಲಕ್ಷ.....

ಶ್ರೀ ವಾಟಾಳ್ ನಾಗರಾಜ್ : ಪೋಲೀಸರಿಗೆ 2 ತಿಂಗಳಿಂದ ಪಡಿತರ ಕೊಡುತ್ತಾ ಇಲ್ಲ. ಸಬ್ಸಿಡಿ ಹಣವನ್ನು ಕೊಡುತ್ತಿಲ್ಲ. ಅಕ್ಕಿ. ಗೋಧಿಯನ್ನು ಸಹ ಕೊಡುತ್ತಿಲ್ಲ. 10 ಕೆ. ಜಿ. ಅಕ್ಕಿ 3 ಕೇಜಿ. ಗೋಧಿ, 2 ಕೆ.ಜಿ. ಸಕ್ಕರೆ ಕೊಡುತ್ತಿದ್ದವುದನ್ನು ಪೋಲೀಸರಿಗೆ 2 ತಿಂಗಳಿಂದ ನಿಲ್ಲಿಸಿದ್ದೀರಿ. ಸಬ್ಸಿಡಿ ಹಣವನ್ನಾದರೂ ಕೊಡಿ, ಇಲ್ಲವಾದರೆ ದವಸ ಧಾನ್ಯಗಳನ್ನಾದರೂ ಕೊಡಿ. ಇಡೀ ರಾಜ್ಯದ ಪೋಲೀಸರಿಗೂ ಕೊಟ್ಟಿಲ್ಲ. 2 ತಿಂಗಳಿನಿಂದ ಕಂಡಿತ ಕೊಟ್ಟಿಲ್ಲ ಸಿದ್ದರಾಮಯ್ಯನವರೇ,

ಅಧ್ಯಕ್ಷರು : ಚೆಕ್ ಮಾಡಿ.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ : ಅನಾಥ ಆಶ್ರಮಗಳಿಗೂ ಸಹಾ ನಿಲ್ಲಿಸಿದ್ದೀರಿ ಏಕೆ ಎಂದು ಹೇಳಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಕನ್‌ಫ್ಯೂಷನ್ ಏಕೆ? ಹೆಚ್ಚಿಗೆ ಮಾಡಿದ್ದರೆ ಹೆಚ್ಚು ಮಾಡಿದ್ದೇವೆಂದು ಹೇಳಿ. ಏಕೆಂದರೆ 262 ಕೋಟಿ ರೂಪಾಯಿಗಳ ಸಬ್ಸಿಡಿ ಮೊದಲು ಏನು ಕೊಡುತ್ತಿದ್ದರು, ಈಗ ಅದನ್ನು ತಿಳಿಸಿ 190 ಕೋಟಿ ರೂಪಾಯಿಗಳು ಮಾತ್ರ ಇಟ್ಟಿದ್ದಾರೆ ಅಂದರೆ ಸುಮಾರು 72 ಕೋಟಿ ರೂಪಾಯಿ ಕಡಿತ ಮಾಡಿದ್ದಾರೆ. because you have reduced the subsidy amount naturally the price has gone up.

ಅದನ್ನು ಬಿಟ್ಟು ಪದೇ ಪದೇ ಒಂದೇ ರಾಗ ಎಳೆದರೆ ಹೇಗೆ? ಕೇಂದ್ರ ಸರ್ಕಾರ ಮಾಡಿದ್ದಾರೆ ನಾವು ಮಾಡಿದ್ದೇನೆ.

ಅಧ್ಯಕ್ಷರು : ನೀವು ಗೈಡ್ ಮಾಡಿದರಲ್ಲಾ ನೋಡೋಣ he may revise in his reply.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದ್ದೇ ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : ಕರ್ನಾಟಕದಲ್ಲಿ ನಾವು ಹಸಿರು ಕಾರ್ಡ್‌ಗಳ ಮೂಲಕ ಸುಮಾರು 62 ಲಕ್ಷ ಕುಟುಂಬ ವರ್ಗದವರಿಗೆ ಪಡಿತರ ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ಅದನ್ನು 28 ಲಕ್ಷಗಳಿಗೆ, 3.5 ರೂಪಾಯಿಯಂತೆ ಕೊಡಲಿಕ್ಕೆ ನಮಗೆ ಸಹಾಯ ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಇದಲ್ಲದೆ ಇನ್ನ 34 ಲಕ್ಷ ಕುಟುಂಬಗಳಿಗೆ ನಾವು ಸಬ್ಸಿಡಿಯನ್ನು ರಾಜ್ಯ ಸರ್ಕಾರದವರು ಕೊಡಬೇಕು, ಇದು ಒಂದು. ಇಡೀ ದೇಶಾದ್ಯಂತ ಹಸಿರು ಕಾರ್ಡ್ ಮೂಲಕ ಅವರು 3.50 ರೂಪಾಯಿ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿರುವುದರಿಂದ ನಾವೂ ಕೊಡತಕ್ಕಂಥದಾಗಲಿ, ಇದರ ಜೊತೆಗೆ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಿಗೂ ಕೂಡ ಹಸಿರು ಕಾರ್ಡ್ ರೇಟ್‌ನಲ್ಲಿ 3.50 ರೂಪಾಯಿನಲ್ಲಿಯೇ ಅಕ್ಕಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇನೆ. ಕೇಸರಿ ಕಾರ್ಡ್ ರೇಟ್‌ನಲ್ಲಿ ಕೊಡುತ್ತಾ ಇದ್ದೆವು. ಇದರ ಜೊತೆಗೆ ಕೇಸರಿ ಕಾರ್ಡ್ ಮೂಲಕ ನಮಗೆ ಬರತಕ್ಕಂಥ ಅಕ್ಕಿಯಲ್ಲಿ ಸುಮಾರು 25 ಸಾವಿರ ಕ್ವಿಂಟಲ್ ಅಕ್ಕಿ ಕಡಿಮೆಯಾಗಿದೆ. ಆದುದರಿಂದ ಅವರಿಗೆ 10 ಕೆ.ಜಿ. ಅಕ್ಕಿಯನ್ನು ಪಡಿತರ ವ್ಯವಸ್ಥೆ ಮೂಲಕ ಏನು ಕೊಡುತ್ತಿದ್ದೇವೋ ಅದನ್ನು 10 ಕೆ.ಜಿ. ಯಿಂದ ನಾವು 2.5 ಕೆ.ಜಿ.ಗೆ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಏಕೆಂದರೆ ನಮ್ಮಲ್ಲಿ ಅಕ್ಕಿ ಸ್ಟಾಕ್ ಇಲ್ಲ. ಅವರು ಕೊಟ್ಟರೆ ನಾವು ಅಕ್ಕಿ ಕೊಡತಕ್ಕಂಥ ಪರಿಸ್ಥಿತಿ ಇರುವುದು. ಇದು ಆದಮೇಲೆ ಮುಖ್ಯಮಂತ್ರಿಗಳು In the Inter-State Development Council ಇದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾವು 2.50 ಪೈಸೆಗೆ ಅಕ್ಕಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ಮಧ್ಯಮ ವರ್ಗದ ಜನರಲ್ಲಿ ಕೂಡ ಬಹಳ ಬಡವರಿದ್ದಾರೆ. ಅವರಿಗೆ 10 ಕೆ. ಜಿ. ಕೊಡುತ್ತಾ ಇದ್ದೇವು, ಅದನ್ನು ಮತ್ತೆ ಎಷ್ಟು ಕೋಟಾಬರುತ್ತಾ ಇತ್ತು ಅಷ್ಟಕ್ಕೆ ರೆಸ್ಟೋರ್ ಮಾಡಬೇಕು ಎಂದು ಹೇಳಿ ಮಾಡಿದ್ದಾರೆ. ಇದನ್ನು ಪ್ರಧಾನ ಮಂತ್ರಿಗಳು ಎಲ್ಲಾ ರಾಜ್ಯಗಳಿಗೂ ಕೂಡ ಸಮಾನವಾಗಿ ಕೊಡತಕ್ಕಂಥದ್ದನ್ನು ಮಾಡುತ್ತೇನೆ ಮತ್ತು ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು ಮತ್ತೆ ಕರೆಯುತ್ತೇನೆ ಎಂದು ಹೇಳಿದ್ದಾರೆ. ಈಗಲೂ ಕೂಡ ನಾವು ಸುಮಾರು192

ಶ್ರೀ ವಾಟಾಳ್ ನಾಗರಾಜ್ : 10 ಕೆ.ಜಿ. ಅಕ್ಕಿ 3 ಕೆ. ಜಿ. ಗೋಧಿ, 2 ಕೆ.ಜಿ. ಸಕ್ಕರೆಯನ್ನು ಪೋಲೀಸ್‌ನವರಿಗೆ ಉಚಿತವಾಗಿ ಕೊಡುತ್ತಿದ್ದರು.

ಅಧ್ಯಕ್ಷರು : ಮಾನ್ಯ ವಾಟಾಳ್‌ರವರೇ ಒಂದೇ ಪ್ರಶ್ನೆ ಎಷ್ಟು ಹೊತ್ತು ಆಗಿದೆ ಹೇಳಿ.

ಶ್ರೀ ವಾಟಾಳ್ ನಾಗರಾಜ್: ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರ ಉತ್ತರ ಸರಿ ಇಲ್ಲವೆಂದು ಹೇಳುತ್ತಿದ್ದೇನೆ. ಪೊಲೀಸ್‌ನವರಿಗೆ ಉಚಿತವಾಗಿ ಕೊಡುತ್ತಿದ್ದರು. ಅದನ್ನು 2 ತಿಂಗಳಿಂದ ನಿಲ್ಲಿಸಿದ್ದಾರೆ, ಏತಕ್ಕೆ ಎಂದು ಸರ್ಕಾರ ಉತ್ತರ ಹೇಳುತ್ತಿಲ್ಲ.

ಅಧ್ಯಕ್ಷರು : ನಿಲ್ಲಿಸಿಲ್ಲ ಎಂದು ಅವರು ಹೇಳಿದರಲ್ಲಾ

ಶ್ರೀ ಡಿ. ಆರ್. ಪಾಟೀಲ್ : ಈ ಒಂದು ಪ್ರಶ್ನೆಗೆ ಹಣಕಾಸು ಸಚಿವರು ಉತ್ತರ ಕೊಡಲಿ, ಮಾನ್ಯ ಸಿದ್ದರಾಮಯ್ಯನವರೇ, ಈಗ 3.50 ಪೈಸೆಗೆ ಅಕ್ಕಿ ಏನು ಮಾರುತ್ತಿದ್ದೀರಿ ಅದನ್ನು 3.20 ಪೈಸೆಗೆ ಮಾರುವುದರಿಂದ, 2.50 ರೂಪಾಯಿಗೆ ಮಾರುವ ಗೋಧಿಯನ್ನು 2 ರೂಪಾಯಿಗೆ ಮಾರಿದರೆ ನಿಮಗೆ ಆಯವ್ಯಯದಲ್ಲಿ ಏನು ಸಬ್ಸಿಡಿ 190 ಕೋಟಿ ಇಟ್ಟಿದ್ದೀರಿಲ್ಲಾ ಆಹಾರಧಾನ್ಯಕ್ಕೆ ಅದಕ್ಕಿಂತ ಹೊರೆ ಕಡಿಮೆ ಆಗುತ್ತದೆಯೋ ಹೆಚ್ಚು ಆಗುತ್ತದೆಯೋ ಅಷ್ಟು ತಿಳಿಸಿ ಬಿಡಿ ಸಾಕು.

ಶ್ರೀ ಸಿದ್ದರಾಮಯ್ಯ : ನಾವು 3.20 ಪೈಸೆಯಿಂದ 3.50 ಪೈಸೆಗೆ ಜುಲೈ 1ನೇ ತಾರೀಖಿನಿಂದ ಜಾರಿಗೆ ತರಬೇಕು ಎಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ಕಾರಣ ಏನೆಂದರೆ ಇಡೀ ದೇಶದಲ್ಲಿ 3.50 ಪೈಸೆಗೆ ಹಸಿರು ಕಾರ್ಡ್ ಮೂಲಕ ಎಲ್ಲಾ ರಾಜ್ಯಗಳಿಗೂ ಕೂಡ ಅಕ್ಕಿ ಕೊಡುತ್ತಿದ್ದು ನಾವು ಆ ರೇಟ್‌ನ್ನು ಇಳವಡಿಸಿಕೊಂಡು 30 ಪೈಸೆಯನ್ನು ಮಾತ್ರ ಜಾಸ್ತಿ ಮಾಡಿದ್ದೇವೆ. ಈ 190 ಕೋಟಿ ರೂಪಾಯಿಯನ್ನು ಇಟ್ಟಿರುವುದು ಏತಕ್ಕೆ ಅಂದರೆ ನಮಗೆ ಕೇಂದ್ರ ಸರ್ಕಾರ ಸಹಾಯ ಮಾಡತಕ್ಕಂಥ ಸಹಾಯ ಧನ 3.50 ಪೈಸೆಯಂತೆ ಬರೀ 28 ಲಕ್ಷ ಕಾರ್ಡ್‌ಗಳಿಗೆ ಮಾತ್ರ, ಇನ್ನು 34 ಕಾರ್ಡ್‌ಗಳಿಗೆ ರಾಜ್ಯ ಸರ್ಕಾರ ಸಬ್ಸಿಡಿ ಕೊಡುತ್ತಾ ಇದ್ದೇವೆ. ಅದಕ್ಕೋಸ್ಕರ 190 ಕೋಟಿ ರೂಪಾಯಿಯನ್ನು ಇಟ್ಟುಕೊಂಡಿದ್ದೇವೆ. ಅದರಿಂದ ನಮಗೆ ಸಬ್ಸಿಡಿ ಕಡಿಮ ಆಗಿರತಕ್ಕಂಥದ್ದು ಸುಮಾರು 70-80 ಕೋಟಿ ಮಾತ್ರ, ಕೇಂದ್ರ ಸರ್ಕಾರ ಸಹಾಯಕ್ಕೆ ಬಂದಿರುವುದರಿಂದ ಇದರಲ್ಲಿ ನಮಗೆ ಬಹಳ ಲಾಭ ಆಯಿತು ಅಥವಾ ಕಡಿಮೆ ಮಾಡಬೇಕು ಎಂಬ ಉದ್ದೇಶ ಅಲ್ಲ.

ವಿಷಯ : ಉಡುಪಿಯಲ್ಲಿನ ಕಾರಾಗೃಹದ ಸ್ಥಳಾಂತರ.

248(2041)-ಶ್ರೀ ಯು. ಆರ್. ಸಭಾಪತಿ (ಉಡುಪಿ) (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ